ಎನ್ನತಕ್ಕ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಮಾನ್ಯ ವಿರೋಧಪಕ್ಷದ ನಾಯಕರು, ಬೇರೆ ಪಕ್ಷಗಳ ಮುಖಂಡರು ಮತ್ತು ಬೇರೆ ಮಿತ್ರರು ಹಾಗೂ ಮಾನ್ಯ ಸದಸ್ಯರು ಆ ಕಡೆ ಈ ಕಡೆ ಇರತಕ್ಕವರು ತಾವೆಲ್ಲ ಹೇಳಿದ್ದೀರಿ. ತಮ್ಮ ಅಭಿಪ್ರಾಯವನ್ನು ಈ ನಿರ್ಣಯದಲ್ಲಿ ನಾವು ನೀವು ಎಲ್ಲರು ಸೇರಿ ಇಟ್ಟಿದ್ದೇವೆ. ಇದನ್ನು ನಾವು ಪಾಸ್ ಮಾಡೋಣ. ಒಕ್ಕೂರಲಿನಿಂದ ತಾವು ಬೆಂಬಲ ಸೂಚಿಸಿದ್ದಕ್ಕಾಗಿ ಈ ಸಂದರ್ಭದಲ್ಲಿ ನಿಮ್ಮನ್ನು ಅಭಿನಂದಿಸಬೇಕು. ನಮ್ಮನ್ನೇ ನಾವು ಅಭಿನಂದಿಸಿಕೊಳ್ಳಬೇಕು ಸರ್ಕಾರದ ಪರವಾಗಿ ಎನ್ನತಕ್ಕ ಮಾತನ್ನು ನಾನು ವ್ಯತ್ಯಾಸ ಮಾಡುವುದಕ್ಕೆ ಹೋಗುವುದಿಲ್ಲ. ಸರ್ಕಾರ ಬೇರೆಯಲ್ಲ, ನಾವು ಬೇರೆಯಲ್ಲ, ಸರ್ಕಾರದ ಪರವಾಗಿ ಎಂದು ಸಾಂಪ್ರದಾಯಕವಾಗಿ ಹೇಳಬೇಕಾಗುತ್ತದೆ. ಬರೆಯ ಬೇಕಾಗುತ್ತದೆ. ಇದು ಸರ್ಕಾರದ ಮುಖಾಂತರ ಹೋಗಬೇಕಾಗುತ್ತದೆ. ಮಾನ್ಯ ಉಪಾಧ್ಯಕ್ಷಿಣಿಯವರೆ, ತಮ್ಮ ಮುಖಾಂತರ ಈ ಸಂದರ್ಭದಲ್ಲಿ ಸರ್ಕಾರದ ಪರವಾಗಿ ಸದನದ ಎಲ್ಲ ಗೌರವಾನ್ವಿತ ಸದಸ್ಯರನ್ನು ಅಭಿನಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ. ಇದಕ್ಕೆ ಬೆಂಬಲ ಕೊಟ್ಟಿದ್ದಕ್ಕಾಗಿ ಮತ್ತೊಮ್ಮೆ ನಾನು ಅಭಿನಂದಿಸುತ್ತೇನೆ.

ಉಪಾಧ್ಯಕ್ಷರು:- ಪ್ರಸ್ತಾವ ಏನೆಂದರೆ, ಉತ್ತರ ಕರ್ನಾಟಕ ಪ್ರದೇಶದಲ್ಲಿ ಕರ್ನಾಟಕ ಉಚ್ಚ ನ್ಯಾಯಾಲಯದ ಖಾಯಂ ಪೀಠದ ಸ್ಥಾಪನೆ ಮಾಡುವ ಅವಶ್ಯಕತೆ ಇದೆಯೆಂದು ಈ ಸದನವು ಪರಿಗಣಿಸಿದೆ ಮತ್ತು ಖಾಯಂ ನ್ಯಾಯ ಪೀಠದ ಸ್ಥಾಪನೆಯನ್ನು ಕೂಡಲೇ ಸ್ಥಾಪಿಸಬೇಕೆಂದು ಭಾರತ ಸರ್ಕಾರವನ್ನು ಈ ಸದನವು ಒತ್ತಾಯಿಸುತ್ತದೆ.

ಪ್ರಸ್ತಾವ ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟಿತು.

ಪ್ರಕಟಣೆ

ಉಪಾಧ್ಯಕ್ಷಿಣಿಯವರು :- ದಿನಾಂಕ 31-3-1992ರ ಮಂಗಳವಾರದಂದು ಸಭೆಯ ಕಾರ್ಯಕಲಾಪಗಳ ಸಲಹಾಸಮಿತಿಯು ಸಭೆ ಸೇರಿ ಚರ್ಚಿಸಿದ ನಂತರ ಈ ಕೆಳಕಂಡ ಕಾರ್ಯಕಲಾಪಗಳನ್ನು ನಡೆಸಲು ತೀರ್ಮಾನಿಸಲಾಯಿತು.

I . ಶಾಸನ ರಚನೆ ಕಾರ್ಯಕಲಾಪಗಳು

1. ಕರ್ನಾಟಕ ಕೃಷ್ಣಾ ಜಲಾನಯನ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ವಿಧೇಯಕ 1992 ಪರ್ಯಾಲೋಚನೆ ಹಾಗೂ ಅಂಗೀಕಾರ
2. ಭಂಗಿ ಕೆಲಸ ರದ್ದಿಯಾತಿಯ ಬಗ್ಗೆ ಶಾಸನಾತ್ಮಕ ನಿರ್ಣಯ.
3. ನಿಯಮ 68ರ ಮೇರೆಗೆ ನಾಗರಹೊಳೆಯಲ್ಲಿನ ಬೆಂಕಿ ಅನಾಹುತದ ಬಗ್ಗೆ ಚರ್ಚೆ.

II ಅರ್ಧಗಂಟೆ ಕಾಲ ಚರ್ಚೆ

MADAM DEPUTY SPEAKER :- And Half an hour discussion, given notice by Sriyuths D. B. Chandregowda, C.Byregowda, Basavaraja Rayareddy and others regarding starred question No. 1520 dated 31-3-1992. ನಾಳೆ ಫರ್ಸ್ಟ್ ಏಪ್ರಿಲ್. ಅಂದರೆ ಇಡೀ ಪ್ರಪಂಚದಾದ್ಯಂತ ಏಪ್ರಿಲ್ ಫೂಲ್ ಆಚರಿಸತಕ್ಕ ದಿನ.

ಮಂತ್ರಿಗಳ ಹೇಳಿಕೆ

ಶಿವಮೊಗ್ಗದಲ್ಲಿ ಪ್ರಶ್ನೆ ಪತ್ರಿಕೆಗಳು ಬಯಲಾಗಿರುವುದರ ಬಗ್ಗೆ

ಶ್ರೀ ಎಂ.ವೀರಪ್ಪ ಮೊಯಿಲಿ:- ಸನ್ಮಾನ್ಯ ಸದಸ್ಯರಾದ ಈಶ್ವರಪ್ಪನವರು ಇವತ್ತು ಬೆಳಿಗ್ಗೆ ಅಥವಾ ನಿನ್ನೆ ಎಸ್.ಎಸ್.ಎಲ್.ಸಿ. ಪರೀಕ್ಷೆ.....

ಶ್ರೀ ಕೆ.ಈಶ್ವರಪ್ಪ:- ಶಿವಮೊಗ್ಗದಲ್ಲಿ 8 ಮತ್ತು 9ನೇ ತರಗತಿ ಪ್ರಶ್ನೆ ಪತ್ರಿಕೆಗಳು ಹಾಗೂ ಫಸ್ಟ್ ಅಂಡ್ ಸೆಕೆಂಡ್ ಸೆಮಿಸ್ಟರಿನ ಬಿ.ಇ. ಪತ್ರಿಕೆಗಳು ಕುವೆಂಪು ಯೂನಿವರ್ಸಿಟಿಯಲ್ಲಿ ಲೀಕ್ ಆಗಿವೆ. ಇದರ ಬಗ್ಗೆ ಕ್ಲಾರಿಫಿಕೇಷನ್ ಕೇಳುತ್ತಿದ್ದೇನೆ.

ಶ್ರೀ ಎಂ.ವೀರಪ್ಪ ಮೊಯಿಲಿ:- ಎಸ್.ಎಸ್.ಎಲ್.ಸಿ. ಪರೀಕ್ಷೆ ಪ್ರಶ್ನೆಪತ್ರಿಕೆಗಳು ಬಯಲಾಗುವ ಪ್ರಶ್ನೆಯೇ ಇಲ್ಲ. ಏಕೆಂದರೆ, ಇನ್ನೂ ವಿತರಣೆಯೇ ಪ್ರಾರಂಭವಾಗಿಲ್ಲ. ನಾಳೆಯಿಂದ ಈ ಪತ್ರಿಕೆಗಳ ವಿತರಣೆ ಪ್ರಾರಂಭವಾಗುತ್ತದೆ.

ಶ್ರೀ ಕೆ.ಎಸ್.ಈಶ್ವರಪ್ಪ:- ನಾನು ಎಸ್.ಎಸ್.ಎಲ್.ಸಿ. ಪ್ರಶ್ನೆಪತ್ರಿಕೆಗಳ ಬಗ್ಗೆ ಕೇಳಿಯೇ ಇಲ್ಲ. 8 ಮತ್ತು 9ನೇ ತರಗತಿಗಳ ಪರೀಕ್ಷೆಗಳು ನಡೆಯುತ್ತಿವೆ. ಈಗಾಗಲೇ ಪ್ರಶ್ನೆಪತ್ರಿಕೆಗಳು ಪ್ರತಿದಿನವೂ ಹೊರಗಡೆ ಬರುತ್ತಿವೆ. ಶಿವಮೊಗ್ಗದಲ್ಲಿ 50 ರೂಪಾಯಿಗಳಿಗೆ ಮಾರಾಟವಾಗುತ್ತಿದೆ. ಇದಕ್ಕೆ ಬಗ್ಗೆ ಸಂಬಂಧಪಟ್ಟ ಡಿ.ಡಿ.ಪಿ.ಐ.ಗಳನ್ನು ಕೇಳಿದರೆ, ನಮಗೆ ಇದರ ಬಗ್ಗೆ ಗೊತ್ತಿಲ್ಲವೆಂದು ಹೇಳುತ್ತಿದ್ದಾರೆ. ಒಂದು ಕಡೆ ಸಣ್ಣಪುಟ್ಟ ಮಕ್ಕಳ ಮನಸ್ಸಿನ ಮೇಲೆ ಏನು ಪರಿಣಾಮವಾಗುತ್ತದೆಂದರೆ ಯಾವುದೋ ಒಂದು ಮಗುವಿನ ತಂದೆ ದುಡ್ಡುಕೊಟ್ಟು ಕೊಂಡು ಕೊಂಡು ಬರುತ್ತಾನೆ, ಪತ್ರಿಕೆ ನನಗೆ ಸಿಕ್ಕಿದೆ ಎಂದು ಹೇಳುತ್ತಾನೆ. ಇದು ಆಗಬಾರದು. ಅದಕ್ಕೋಸ್ಕರ ಸರ್ಕಾರದವರು ಇದರ ಬಗ್ಗೆ ಕ್ಲಾರಿಫಿಕೇಷನ್ ಕೊಡಬೇಕು.

ಉಪಾಧ್ಯಕ್ಷೆಣಿಯವರು:- ಇದರ ಬಗ್ಗೆ ತಾವೇನಾದರೂ ಹೇಳುತ್ತೀರಾ . . . .

ಶ್ರೀ ಎಂ.ವೀರಪ್ಪ ಮೊಯಿಲಿ:- ಸನ್ಮಾನ್ಯ ಅಧ್ಯಕ್ಷರೇ, 8 ಮತ್ತು 9ನೇ ತರಗತಿಯ ಪರೀಕ್ಷೆಗಳನ್ನು ಸರ್ಕಾರ ಮಾಡುವುದಿಲ್ಲ. ಈ ಪರೀಕ್ಷೆಗಳನ್ನು ಜಿಲ್ಲಾ ಶಿಕ್ಷಕರ ಸಂಘದವರು ನಡೆಸುತ್ತಿದ್ದಾರೆ. ಆದ್ದರಿಂದ ಇವು ಸಾರ್ವತ್ರಿಕ ಪರೀಕ್ಷೆ ಅಲ್ಲ. ಆಯಾ ಜಿಲ್ಲೆಯವರೇ ಈ ಪರೀಕ್ಷೆಗಳನ್ನು ನಡೆಸುತ್ತಾರೆ. ಜಿಲ್ಲಾ ಶಿಕ್ಷಕ ಸಂಘದವರು ಸ್ವಲ್ಪ ಜಾಗ್ರತೆಯಾಗಿ ನಿಗಾ ವಹಿಸಬೇಕು. ನಾವು ಇದರ ಬಗ್ಗೆ ಅವರಿಗೆ ಎಚ್ಚರಿಕೆಯನ್ನು ಕೊಟ್ಟಿದ್ದೇವೆ. 25-50 ರೂಪಾಯಿಗಳನ್ನು ತಂದರೆ, ಯಾರಿಗೂ ಲಾಭ ಬರುವುದಿಲ್ಲ. ಅವರಿಗೆ ನಾವು ರ್ಯಾಂಕ್ ಕೊಡುವುದಿಲ್ಲ ಮತ್ತೆ ಏನನ್ನೂ ಕೊಡುವುದಿಲ್ಲ. ಮತ್ತೆ ಅವರು ಬಿ.ಇ. ಪ್ರಶ್ನೆ ಪತ್ರಿಕೆಗಳ ಬಗ್ಗೆ ಹೇಳಿದ್ದಾರೆ, ಇವು ಕೂಡ ಬಯಲಾಗಿಲ್ಲ. ಈ ಪ್ರಶ್ನೆ ಪತ್ರಿಕೆಗಳ ಬಗ್ಗೆ ನಾವು ಏನು ಮಾಡುತ್ತೇವೆ ಎಂದರೆ, ಬೇರೆ ಬೇರೆ 2-2 ಆಲ್ಟರ್‌ನೇಟಿವ್ ಸೆಟ್ ಇಟ್ಟುಕೊಳ್ಳುತ್ತೇವೆ, ಸಪರೇಟ್ ಸೆಟ್ ಕೊಟ್ಟಿದ್ದಾರೆ, ಆದ್ದರಿಂದ ಇದು ಕೂಡ ಆಗಿಲ್ಲ.

ಶ್ರೀ ಕೆ.ಎಸ್.ಈಶ್ವರಪ್ಪ:- ಒಂದು ಪ್ರಶ್ನೆ ಪತ್ರಿಕೆ ಪ್ರಿಂಟ್ ಮಾಡಿದೆ, ಇನ್ನೊಂದು ಪ್ರಶ್ನೆಪತ್ರಿಕೆ ಜೆರಾಕ್ಸ್ ಮಾಡಿದ್ದು ಎಂದು ಪ್ರಶ್ನೆಗಳು ಬೇರೆ ಬೇರೆಯಾಗಿವೆ. ಶಿವಮೊಗ್ಗ ಕೇಂದ್ರಕ್ಕೆ ಜೆರಾಕ್ಸ್ ಪತ್ರಿಕೆಗಳು ಬಂದಿವೆ. ಚಿತ್ರದುರ್ಗ, ದಾವಣಗೆರೆ ಈ ಭಾಗಗಳಿಗೆ ಪ್ರಿಂಟೆಡ್ ಪತ್ರಿಕೆಗಳು ಬಂದಿವೆ.

ಶ್ರೀ ಎಂ.ವೀರಪ್ಪ ಮೊಯಿಲಿ :- ಈ ಪ್ರಶ್ನೆಯನ್ನು ಸನ್ಮಾನ್ಯ ಸದಸ್ಯರು ಮೊನ್ನೆಯ ಶಾಸನ ಸಭೆಯಲ್ಲಿ ಎತ್ತಿದ್ದಾರೆ. ಇದರಲ್ಲಿ ಇರೆಗ್ಯುಲಾರಿಟೀಸ್ ಏನೂ ಇಲ್ಲ. ಏಕೆಂದರೆ, ಒಂದು ಕೇಂದ್ರದಲ್ಲಿ ಪ್ರಶ್ನೆ ಪತ್ರಿಕೆ ಏನಾದರೂ ಹೆಚ್ಚುಕಡಿಮೆಯಾದರೆ, ನೆಕ್ಸ್ಟ್ ಆಲ್ಟರ್‌ನೇಟಿವ್ ಪ್ರಶ್ನೆ ಪತ್ರಿಕೆ ಇರುತ್ತದೆ. ಅದು ಜೆರಾಕ್ಸ್‌ನಲ್ಲಿರುತ್ತದೆ, ಅದನ್ನು ಇಷ್ಯೂ ಮಾಡುತ್ತಾರೆ. ಆದ್ದರಿಂದ ಪ್ರಶ್ನೆಗಳು ಬೇರೆ ಬೇರೆಯಾಗುತ್ತದೆ.

ಶ್ರೀ ಕೆ.ಎಸ್.ಈಶ್ವರಪ್ಪ:- ಪ್ರಶ್ನೆಪತ್ರಿಕೆಗಳು ಒಂದು ಕೇಂದ್ರಕ್ಕೂ ಇನ್ನೊಂದು ಕೇಂದ್ರಕ್ಕೂ ಬೇರೆಯಾಗುತ್ತಿದೆ. ಒಂದೇ ಪ್ರಶ್ನೆ ಪತ್ರಿಕೆ 4 ಕೇಂದ್ರಗಳಲ್ಲೂ ಬಂದಿದ್ದರೆ ನಮ್ಮದೇನೂ ಅಭ್ಯಂತರ ಇಲ್ಲ. ಒಂದು ಕಡೆ ಲೀಕ್ ಆಗಿದೆ.

ಶ್ರೀ ಎಂ.ವೀರಪ್ಪ ಮೊಯಿಲಿ:- ಇದಕ್ಕೆ ಮೊನ್ನೆ ಉತ್ತರವನ್ನು ಕೊಟ್ಟಿದ್ದೇನೆ, ಪುನ: ಬೇಕಾದರೆ ಕೊಡುತ್ತೇನೆ. ನೀವು ನಮ್ಮ ಚೇಂಬರಿಗೆ ಬನ್ನಿ.

ಉಪಾಧ್ಯಕ್ಷಿಣಿಯವರು :- ತಾವು ನಾಳೆ ಅವರ ಹತ್ತಿರ ಚರ್ಚೆ ಮಾಡಿ. ಮಾನ್ಯ ವಾಟಾಳ್ ನಾಗರಾಜ್‌ರವರು ನಾಳೆ ಮೂರ್ಖರ ದಿನವೆಂದು ಆಗಲೇ ಹೇಳಿದರು. ಆದರೂ ಸಹ ನಮ್ಮ ಕಾರ್ಯಕಲಾಪಗಳ ಸಲಹಾ ಸಮಿತಿಯವರು ನಾಳೆ ಸಭೆ ನಡೆಸಬೇಕೆಂದು ತೀರ್ಮಾನ ತೆಗೆದುಕೊಂಡಿದ್ದಾರೆ. ಆದ್ದರಿಂದ ನೀವು ಯಾರೂ ಫೂಲ್ ಆಗುವುದು ಬೇಡ. ನೀವೆಲ್ಲರೂ ನಾಳಿನ ಸಭೆಗೆ ಬರಬೇಕೆಂದು ಹೇಳಿ, ಇಂದಿನ ಸಭೆಯನ್ನು ಮುಂದೂಡುತ್ತೇನೆ ಮತ್ತು ನಾಳೆ ಬೆಳಿಗ್ಗೆ 10 ಗಂಟೆಗೆ ಮತ್ತೆ ಸದನವು ಸಮಾವೇಶಗೊಳ್ಳುವುದು.

(ಸದನವು ಸಂಜೆ 4-58 ಕ್ಕೆ ಮುಕ್ತಾಯವಾಗಿ, ಮತ್ತೆ ದಿನಾಂಕ : 1-4-92 ಬುಧವಾರ ಬೆಳಿಗ್ಗೆ 10 ಗಂಟೆಗೆ ಸಮಾವೇಶಗೊಳ್ಳಲು ನಿರ್ಧರಿಸಿತು.)

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)

ಅನುಬಂಧ I

ಕನ್ನಡ ವಿಶ್ವವಿದ್ಯಾನಿಲಯ (ತಿದ್ದುಪಡಿ) ವಿಧೇಯಕ. 1992

(1992ರ ವಿಧಾನಸಭಾ ವಿಧೇಯಕ ಸಂಖ್ಯೆ 18)

ಕನ್ನಡ ವಿಶ್ವವಿದ್ಯಾನಿಲಯ ಅಧಿನಿಯಮ, 1991ನ್ನು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಕನ್ನಡ ವಿಶ್ವವಿದ್ಯಾನಿಲಯ ಅಧಿನಿಯಮ. 1991 (1991 ರ ಕರ್ನಾಟಕ ಅಧಿನಿಯಮ 23)ನ್ನು, ಇದರಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ.

ಭಾರತ ಗಣರಾಜ್ಯದ ನಲವತ್ತಮೂರನೇ ವರ್ಷದಲ್ಲಿ ಕರ್ನಾಟಕ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ.

1. ಚಿಕ್ಕ ಹೆಸರು ಮತ್ತು ಪ್ರಾರಂಭ :- (1) ಈ ಅಧಿನಿಯಮವನ್ನು ಕನ್ನಡ ವಿಶ್ವ ವಿದ್ಯಾನಿಲಯ (ತಿದ್ದುಪಡಿ) ಅಧಿನಿಯಮ, 1992 ಎಂದು ಕರೆಯತಕ್ಕುದು.

(2) ಇದು ಈ ಕೂಡಲೇ ಜಾರಿಯಲ್ಲಿ ಬರತಕ್ಕುದು.

2. 44 ಮತ್ತು 45 ನೇ ಪ್ರಕರಣಗಳ ತಿದ್ದುಪಡಿ :- ಕನ್ನಡ ವಿಶ್ವವಿದ್ಯಾನಿಲಯ ಅಧಿನಿಯಮ, 1991 (1991 ರ ಕರ್ನಾಟಕ ಅಧಿನಿಯಮ 23) (ಇದರಲ್ಲಿ ಇನ್ನು ಮುಂದೆ ಮೂಲ ಅಧಿನಿಯಮವೆಂದು ಉಲ್ಲಿಖಿತವಾದ) ರಲ್ಲಿ, 44 ಮತ್ತು 45ನೇ ಪ್ರಕರಣಗಳಲ್ಲಿ "ನೇಮಕ ಮಾಡತಕ್ಕುದು" ಎಂಬ ಪದಗಳಿಗೆ ಮುಂಚೆ, " ರಾಜ್ಯ ಸರ್ಕಾರವು" ಎಂಬ ಪದಗಳು ಮತ್ತು ಅಲ್ಪ ವಿರಾಮಗಳನ್ನು ಸೇರಿಸತಕ್ಕುದು ಮತ್ತು ಯಾವಾಗಲೂ ಸೇರಿಸಿರುವುದಾಗಿ ಭಾವಿಸತಕ್ಕುದು.

3. 46 ನೇ ಪ್ರಕರಣದಲ್ಲಿ ತಿದ್ದುಪಡಿ :- ಮೂಲ ಅಧಿನಿಯಮದ 46ನೇ ಪ್ರಕರಣದಲ್ಲಿ.

(i) ಶೀರ್ಷಿಕೆಯಲ್ಲಿ "ಗ್ರಂಥಪಾಲರ" ಎಂಬ ಪದಕ್ಕೆ, "ಹಣಕಾಸು ಅಧಿಕಾರಿಯ" ಎಂಬ ಪದವನ್ನು ಪ್ರತಿಸ್ಥಾಪಿಸತಕ್ಕುದು ಮತ್ತು ಯಾವಾಗಲೂ ಪ್ರತಿಸ್ಥಾಪಿಸಿರುವುದಾಗಿ ಭಾವಿಸತಕ್ಕುದು ; ಮತ್ತು,

(ii) "ನೇಮಕ ಮಾಡತಕ್ಕುದು " ಎಂಬ ಪದಗಳಿಗೆ ಮುಂಚೆ, "ರಾಜ್ಯ ಸರ್ಕಾರವು" ಎಂಬ ಪದಗಳು ಮತ್ತು ಅಲ್ಪ ವಿರಾಮಗಳನ್ನು ಸೇರಿಸತಕ್ಕುದು ಮತ್ತು ಯಾವಾಗಲೂ ಸೇರಿಸಿರುವುದಾಗಿ ಭಾವಿಸತಕ್ಕುದು.

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಕನ್ನಡ ವಿಶ್ವವಿದ್ಯಾನಿಲಯ ಅಧಿನಿಯಮ, 1991 ರಲ್ಲಿಯ 44, 45 ಮತ್ತು 46ನೇ ಪ್ರಕರಣಗಳಲ್ಲಿಯ ಕೆಲ ನ್ಯೂನತೆಗಳನ್ನು ಸರಿಪಡಿಸುವುದು ಆವಶ್ಯಕವೆಂದು ಭಾವಿಸಲಾಗಿದೆ.

ಆದ್ದರಿಂದ ವಿಧೇಯಕ,